ಸಾತನೂರಿನಲ್ಲಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭ

೧೦೨ (೧೩೧) ಶ್ರೀ ಕೆ. ಜಿ. ಶ್ರೀನಿವಾಸಮೂರ್ತಿ (ಸಾತನೂರು) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಸಾತನೂರು ಕ್ಷೇತ್ರದಲ್ಲಿ ಎಷ್ಟು ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಿರುತ್ತವೆ ?

ಆ) ಸಾತನೂರು ಮತ್ತು ಆರಳಾಳುಸಂದ್ರದಲ್ಲಿ ಪ್ರಥಮ ದರ್ಜೆ ಕಾಲೇಜುಗಳು ಪ್ರಾರಂಭಿಸುವುದು ಸರ್ಕಾರದವರ ಗಮನದಲ್ಲಿದೆಯೇ ?

ಇ) ಹಾಗಿದ್ದಲ್ಲಿ ಮುಂದಿನ ಸಾಲಿನಲ್ಲಿಯಾದರೂ ಅದನ್ನು ಪ್ರಾರಂಭಿಸಲು ಅನುಮತಿ ಕೊಡಲಾಗುವುದೇ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ಪ್ರಾಥಮಿಕ — ೧೪೫
ಮಾಧ್ಯಮಿಕ — ೨೬
ಪ್ರೌಢಶಾಲೆ — ೫

ಆ) —ಇಲ್ಲ—

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಪ್ರತಿ ತಾಲ್ಲೂಕಿನಲ್ಲೂ ತಾಂತ್ರಿಕ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ

೧೦೩ (೧೦೩) ಶ್ರೀ ಬಿ. ಬೈರಪ್ಪಾಜಿ (ತುರುವೆ ಕೆರೆ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಪ್ರತಿ ತಾಲ್ಲೂಕಿಗೊಂದರಂತೆ ತಾಂತ್ರಿಕ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರದವರು ತೀರ್ಮಾನಿಸಿರುವುದು ನಿಜವೆ?

ಆ) ಹಾಗಿದ್ದರೆ ತುರುವೆ ಕೆರೆ ತಾಲ್ಲೂಕು ಕೇಂದ್ರದಲ್ಲಿ ೧೯೮೪-೮೫ ರಿಂದಲೇ ತಾಂತ್ರಿಕ ಕಾಲೇಜನ್ನು ಪ್ರಾರಂಭಿಸಲು ಸರ್ಕಾರದವರು ಸೂಕ್ತ ಏರ್ಪಾಡು ಮಾಡುವರೇ?

ಶ್ರೀ ಬಿ. ರಾಚಯ್ಯ (ಶಿಕ್ಷಣಮಂತ್ರಿಗಳು).—

ಅ) —ಇಲ್ಲ—

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಬೈರಪ್ಪಾಜಿ (ತುರುವೆ ಕೆರೆ).—ಮಾನ್ಯ ಸಚಿವರು ನನ್ನ ಮೊದಲನೆಯ ಪ್ರಶ್ನೆಗೆ ಇಲ್ಲ ಎಂದು ಹೇಳಿಬಿಟ್ಟಿದ್ದಾರೆ. ನಮ್ಮ ತುರುವೆ ಕೆರೆ ತಾಲ್ಲೂಕಿನಲ್ಲಿ ೨೦ ಹೈಸ್ಕೂಲುಗಳಿವೆ, ೪ ಜೂನಿಯರ್ ಕಾಲೆಜುಗಳು ಇವೆ. ತಾಂತ್ರಿಕ ಕಾಲೆಜು ಇಲ್ಲದೆ ವಿದ್ಯಾರ್ಥಿಗಳು ಬಹಳ ತೊಂದರೆಯನ್ನು ಪಡುದ್ದಾರೆ. ಆದ್ದರಿಂದ ಇಲ್ಲಿ ಒಂದು ತಾಂತ್ರಿಕ ವಿದ್ಯಾ ಶಾಲೆಯ ಅಗತ್ಯ ಬಹಳವಾಗಿ ಇರುತ್ತದೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ತುರುವೆ ಕೆರೆ ಟೌನ್‌ನಲ್ಲಿ ೧೯೮೪-೮೫ನೇ ಸಾಲಿಗಾದರೂ ಒಂದು ತಾಂತ್ರಿಕ ಕಾಲೆಜನ್ನು ಪ್ರಾರಂಭ ಮಾಡುವ ವ್ಯವಸ್ಥೆಯನ್ನು ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ತಾಂತ್ರಿಕ ಶಾಲಾ ಕಾಲೇಜನ್ನು ಪ್ರತಿಯೊಂದು ಸಬ್ ಡಿವಿಜನ್‌ನಲ್ಲಿಯೂ ತೆಗೆಯಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿದ್ದಾರೆ. ಈ ವರ್ಷ ೨೩ ತಾಂತ್ರಿಕ

ಕಾಲೇಜುಗಳನ್ನು ತೆಗೆಯಲಿಕ್ಕೆ ಖಾಸಗಿಯವರಿಗೂ ಅನುಮತಿಯನ್ನು ಕೊಟ್ಟಿದ್ದೇವೆ. ಮಹಿಳಾ ತಾಂತ್ರಿಕ ಕಾಲೇಜನ್ನು ಹಾಸನದಲ್ಲಿ ತೆಗೆಯಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆ. ತಾಂತ್ರಿಕ ಶಾಲೆಗಳನ್ನು ತೆಗೆಯಲಕ್ಕಂಥವರಿಗೆ ಕೆಲವು ಷರತ್ತುಗಳನ್ನು ಹಾಕಿದ್ದೇವೆ. ಖಾಗಿಸಯವರು ೧೦ ಲಕ್ಷ ರೂಪಾಯಿಗಳನ್ನು ವಂತಿಗೆ ಕೊಡಬೇಕೆಂತಲೂ, ೨೫ ಎಕರೆ ಜಮೀನು ಕೊಡಬೇಕೆಂದು ಮತ್ತು ಸರ್ಕಾರಿ ಆದೇಶದಂತೆ ಮೈನಾರಿಟಿ ಕಮ್ಯುನಿಟಿಯವರಿಗೆ, ಷೆಡ್ಯೂಲ್‌ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಜನಾಂಗದವರಿಗೆ ಏನು ಸರ್ಕಾರದಲ್ಲಿ ರಿಸರ್ವೇಷನ್ ಇರುತ್ತದೆ ಅದರಂತೆ ಕೊಡಬೇಕೆಂತಲೂ ಷರತ್ತುಗಳನ್ನು ಹಾಕಿರುತ್ತೇವೆ. ಈ ಷರತ್ತುಗಳಿಗೆ ಒಪ್ಪಿರತಕ್ಕಂಥ ೨೩ ಶಾಲೆಗಳಿಗೆ ಮನ್ನಣೆಯನ್ನು ಸರ್ಕಾರದವರು ಕೊಟ್ಟಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—೨೩ ಶಾಲೆಗಳಿಗೆ ಅನುಮತಿಯನ್ನು ಕೊಟ್ಟಿದ್ದೇವೆಂದು ಮಾನ್ಯ ಸಚಿವರು ತಿಳಿಸಿದರು. ೧೦ ಲಕ್ಷ ರೂಪಾಯಿಗಳನ್ನು ಯಾರು ಡಿಪಾಸಿಟ್ ಮಾಡಿರುತ್ತಾರೆ ಮತ್ತು ೨೫ ಎಕರೆ ಜಮೀನನ್ನು ಯಾರು ಕೊಟ್ಟಿರುತ್ತಾರೆ, ಮತ್ತು ಅವರು ಯಾವಾಗ ಪ್ರಾರಂಭಮಾಡಲು ವ್ಯವಸ್ಥೆ ಮಾಡಿದ್ದಾರೆಂಬುದನ್ನು ತಿಳಿಸುತ್ತೀರಾ?

ಅಧ್ಯಕ್ಷರು.—ಮಾನ್ಯ ಸಚಿವರು ವಿವರಗಳು ಇದ್ದರೆ ಕೊಡಿ. ಇಲ್ಲದಿದ್ದರೆ ತರಿಸಿಕೊಡಿ.

ಶ್ರೀ ಬಿ. ರಾಚಯ್ಯ.—ಪ್ರತಿಯೊಂದು ವಿವರವನ್ನು ಕೊಟ್ಟಿರುತ್ತೇನೆ. ಇನ್ನು ಬ್ಯಾಂಕ್‌ನಲ್ಲಿ ಡಿಫಾಸಿಟ್ ಇಡುವ ಬಗ್ಗೆ ಕೆಲವರು ರಿಯಾಯಿತಿಯನ್ನು ಕೇಳಿರುತ್ತಾರೆ. ೧೦ ಲಕ್ಷ ರೂಪಾಯಿಗಳ ಡಿಪಾಸಿಟಿಗೆ ಬದಲಾಗಿ ೫ ಲಕ್ಷ ರೂಪಾಯಿಗಳನ್ನು ಡಿಪಾಸಿಟ್ ಇಡಲು ಕೇಳಿರುತ್ತಾರೆ. ಅವರಿಗೆ ರಿಯಾಯಿತಿಯನ್ನೂ ಕೂಡ ಕೊಟ್ಟಿದ್ದೇವೆ.

ತೆಂಗಿನ ಬೆಳೆಗೆ ರೋಗ ಬಂದಿರುವ ಬಗ್ಗೆ

೧೦೪ (೧೫೦) ಶ್ರೀ ಎಸ್. ಪಿ. ಗಂಗಾಧರಪ್ಪ (ತಿಪಟೂರು) ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕರ್ನಾಟಕ ರಾಜ್ಯದಲ್ಲಿ ತೆಂಗಿನ ಬೆಳೆಗೆ ರೋಗ ಬಂದು ಮರಗಳು ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ಹಾಗೂ ರೋಗಗಳ ನಿರ್ಮೂಲನ ಮಾಡಲು ಎಷ್ಟು ಕಾಲಾವಕಾಶ ಬೇಕಾಗುತ್ತದೆ ?

ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ರಾಜ್ಯ ಮಂತ್ರಿಗಳು) ಮಾನ್ಯ ಕೃಷಿ ಸಚಿವರ ಪರವಾಗಿ.—

ಅ) ಹೌದು, ರಾಜ್ಯದ ಕೆಲವೊಂದು ಪ್ರದೇಶಗಳಲ್ಲಿ ತೆಂಗಿನ ಮರಗಳಿಗೆ ಕಪ್ಪು ತಲೆ ಕೀಟದ ಬಾಧೆ ಇದೆಯೆಂದು ಕಂಡುಬಂದಿದೆ.

ಆ) ರಾಜ್ಯದ ತೀರಪ್ರದೇಶದಲ್ಲಿ ಮಾತ್ರ ಸೀಮಿತವಾಗಿದ್ದು ಈಗ ಮೈದಾನ ಪ್ರದೇಶಗಳಿಗೂ ಹರಡುತ್ತಿರುವ ಈ ಕೀಟದ ತೀವ್ರ ಬಾಧೆಯನ್ನು ಕಂಡು ಸರ್ಕಾರವು ಅದರ ನಿಯಂತ್ರಣಕ್ಕಾಗಿ ಈಗಾಗಲೇ ಒಂದು ಯೋಜನೆಯನ್ನು ಕೈಗೊಂಡಿದ್ದು, ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

(೧) ತೆಂಗು ಬೆಳೆ ಪ್ರದೇಶದಲ್ಲಿ ೫೦ ಪರೋಪಜೀವಿಗಳನ್ನು ಉತ್ಪಾದಿಸುವ ಪ್ರಯೋಗಾಲಯಗಳನ್ನು ಪ್ರಾರಂಭಿಸಲಾಗಿದೆ. (ಸ್ಥಳಗಳ ಪಟ್ಟಿಯನ್ನು ಲಗತ್ತಿಸಿದೆ).

(೨) ಚುಚ್ಚು ಮದ್ದಿಗೆ ಬೇಕಾಗುವ ಕೀಟನಾಶಕ ಔಷಧಿಯನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಉಚಿತವಾಗಿಯೂ ಮತ್ತು ದೊಡ್ಡ ರೈತರಿಗೆ ಶೇ. ೫೦ರ ರಿಯಾಯಿತಿ ದರದಲ್ಲಿ ಸರಬರಾಜು ಮಾಡುವ ವ್ಯವಸ್ಥೆ ಮಾಡಲಾಗಿದ್ದು ರೈತರ ಸಂಪೂರ್ಣ ಸಹಕಾರದಿಂದ ಮಾತ್ರ ಈ ಬಾಧೆಯ ಪೂರ್ಣ ನಿಯಂತ್ರಣವು ಸಾಧ್ಯವಾಗಬಹುದು.